ಹವ್ಯಕ ಬಾಂಧವರಿಗೆಲ್ಲ ನಮಸ್ಕಾರಗಳು.

ಆನು ಒಬ್ಬ ಹವ್ಯಕ ಅಡಿಕೆ ಕೃಷಿಕನಾಗಿ ನಿಂಗ್ಳೆಲ್ಲರೊಡನೆ ಯನ್ನ ವಿಚಾರ ಹಂಚ್ಗ್ಯಂಬ್ಲೆ ಬಯಸ್ತಿ. ಘಟನೆಗ್ಳ ಸಂಗ್ತಿಗೆ ವಿಷಯ ಇಟ್ರೆ ಹೆಚ್ಚಿಗೆ ಪ್ರಸ್ತುತ ಅಗ್ತೆನ. ೧೯೬೪ರಲ್ಲಿ ವಿಟ್ಲದ ಅಡಿಕೆ ಸಂಶೋಧನಾ ಕೇಂದ್ರದ ನಿರ್ದೇಶಕರಾಗಿದ್ದ ಅಹಮದ್ ಬಾವಪ್ಪಾ ಯಮ್ಮನೆ ತೋಟ ನೋಡಿ, ಇದೆಂತ ಅಡಿಕೆ ತೋಟ, ಬಾಳೆ ಯಾಲಕ್ಕಿ ಮೆಣ್ಸು ಎಲ್ಲ ಇದ್ದು, ಅಡಿಕೆ ಅಂದ್ರೆ ಅಡಿಕೆ ಒಂದೇ ಬೆಳ್ಸವ್ಕು ಹೇಳಿ ಆಕ್ಷೇಪ ಮಾಡಿದಿದ್ರು. ೧೯೭೨ರಲ್ಲಿ ಅಡಿಕೆ ಬೆಲೆ ಕನಿಷ್ಟಕ್ಕೆ ಬಂದಾಗ ಇದೇ ಬಾವಪ್ಪನವ್ರು ಇಂಡಿಯನ್ ಫಾರ್ಮಿಂಗ್ ಪತ್ರಿಕೆಯಲ್ಲಿ ಒಂದು ಲೇಖನ ಬರೆದ್ರು. ಮಲ್ಟೀ ಸ್ಟೋರೇಡ್ ಕ್ರಾಪ್ ಪ್ಯಾಟರ್ನ ಹೇಳಿ, ಮೇಲೆ ಅಡಿಕೆ ಮಧ್ಯದಲ್ಲಿ ಮೆಣ್ಸು ಮತ್ತೆ ಕೆಳ್ಗೆ ಬಾಳೆ, ಯಾಲಕ್ಕಿ ಅಥವ ಶುಂಠಿ ಇಲ್ಯ ಅನಾನಸು ಹೇಳಿ. ಈಗ್ಳೂ ಇದು ಪ್ರಸ್ತುತ ಆಗ್ತು ವೆನಿಲ್ಲಾ ಮತ್ತೆ ಕೊಕ್ಕೊ ಸೇರ್ಸಿ.

ಮೊದಲ್ನೆ ಮಹಾಯುದ್ಧದ ಸಂದರ್ಭದಲ್ಲಿ ಯನ್ನ ಅಪ್ಪಯ್ಯ, ದಿ|| ಮಾಬ್ಲೇಶ್ವರ ಹೆಗ್ಡೆ ಭೈರುಂಬೆ, ಅಜ್ಜ ತೀರಿದ್ರಿಂದ ವಿದ್ಯಾಭ್ಯಾಸ ನಿಲ್ಸಿ ಮನೆ ಜವಾಬ್ದಾರಿ ವಹಿಸ್ಗ್ಯಂಡು, ಯಾಲಕ್ಕಿ ಬೆಳ್ದು ಸಾಲ ತೀರ್ಸಿ ಜಮೀನಿನ ಅಭಿವೃದ್ಧಿ ಮಾಡಿ ನಮ್ಮ ಭಾಗದಲ್ಲಿ ಆ ಕಾಲದಲ್ಲೆ ಮಾದರಿ ಕೃಷಿಕ ಆಗಿದ್ದ. ೧೯೪೦ರಲ್ಲಿ ಪಾಳುಬಿದ್ದ ಭತ್ತದ ಗದ್ದೆ ಹಿಡಿದು ೧೯೫೫ರವರೆಗೆ ಭತ್ತದ ಕೃಷಿ ಮಾಡಿ ಅದು ಲಾಭದಾಯಕವಾಗಿಲ್ದಿದ್ದಕ್ಕೆ, ಆ ಜಮೀನಿನಲ್ಲಿ ಅಡಿಕೆ ತೋಟ ಬೆಳ್ಸಲ್ಲೆ ಶುರು ಮಾಡಿ, ೧೯೬೨ರ ಭಾರೀ ಮಳೆಯಲ್ಲಿ ಅದೆಲ್ಲ ಕೊಚ್ಚಿಹೋಗಿ ತುಂಬಾ ಹಾನಿ ಆದ್ರೂ ಬಿಡದೆ ಮುಂದುವರೆಸಿ ಇವತ್ತು ಅದು ಒಳ್ಳೆ ಅಡಿಕೆ

ತೋಟವಾಗಿದ್ದು. ೪೦ರ ದಶಕದಲ್ಲೆ ಡೀಸೆಲ್ ಪಂಪ್ ಅಳವಡಿಸಿ ಕೃಷಿಯಲ್ಲಿ ನೀರಾವರಿ ವ್ಯವಸ್ಥೆ ಮಾಡಿದಿದ್ದ. ೧೯೬೨ರಿಂದಾ ಯಮ್ಮನೆಲ್ಲಿ ಅಣ್ಣನ ಮಾರ್ಗದರ್ಶನದಲ್ಲಿ ಭತ್ತದ ೨ನೆ ಬೆಳೆ ತಗಂಬ್ಲೆ ಶುರು ಮಾಡ್ದ್ರು. ಅಣ್ಣ ಕೃಷ್ಣ ಹೆಗ್ಡೆಯವ್ರು ಮೊದ್ಲಿಗೆ ಹ್ಯಾಂಡ್ ಬುಕ್ ಆಫ್ ಎಗ್ರಿಕಲ್ಚರ್ ಪುಸ್ತಕ ಓದಿ ಮಣ್ಣು ಪರೀಕ್ಷೆ ಮಾಡ್ಸಿ ಯಂಗ್ಳ ಭೂಮಿಗೆ ಹೊಂದುವ ರಾಸಾಯನಿಕ ಗೊಬ್ಬರಗಳನ್ನೇ ಬಳ್ಸಿ, ಒಳ್ಳೆ ಬೆಳೆ ಬಪ್ಲೆ ಶುರು ಆತು. ಯಂಗ್ಳ ಊರಲ್ಲಿ ಅವಾಗ ೩ ಜನ ಉತ್ಸಾಹಿಗ ಇದ್ದಿದ್ದ. ಅವು  ಮೂರೂ ಜನ ಯಂಗ್ಳ ಸಹಕಾರಿ ಸಂಘದ ಮೂಲಕ ಕೃಷಿಗೆ ಸಂಬಂಧ ಪಟ್ಟ ಅಭಿವೃದ್ಧಿ ಕೆಲ್ಸ ಶುರು ಮಾಡ್ದ. ಅಣ್ಣ ಕೃಷ್ಣ ಹೆಗ್ಡೆಯವ್ರು ಕೃಷಿಯ ತಾಂತ್ರಿಕ ಅಂಶಗಳನ್ನು ಕೃಷಿ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರಗಳೊಡನೆ ಸಂಪರ್ಕವಿಟ್ಟುಗೊಂಡು ನಮಗೆಲ್ಲ ಮಾರ್ಗದರ್ಶಕರಾದ್ರು. ಅಶೀಸರ ನಾರಾಯಣ ಹೆಗ್ಡೆಯವ್ರು ಪುಷ್ಪ ಕೃಷಿ, ಹಣ್ಣುಹಂಪಲ, ಹೈನೋದ್ಯಮ ಮತ್ತು ಜೇನು ಸಾಕಾಣಿಕೆಯಲ್ಲಿ ಪರಿಶ್ರಮ ಮಾಡಿ ನಮಗೆಲ್ಲ ಅನುಕರಣೀಯರಾದ್ರು. ಹುಳಗೋಳ ಗಜಾನನ ಹೆಗ್ಡೆಯವ್ರು ಸಹಕಾರೀ ರಂಗದಲ್ಲಿ ನಮ್ಮೆಲ್ಲರನ್ನೂ ಒಗ್ಗೂಡಿಸಿ, ಆರ್ಥಿಕವಾಗಿ ಮತ್ತು ಮಾರಾಟ ವ್ಯವಸ್ಥೆಯಲ್ಲಿ ತೊಂದ್ರೆ ಇಲ್ದೆ ಹೋದಾಂಗೆ ಮಾಡಿದ್ರು. ನಮ್ಮ ಹುಳಗೋಳ ಸಹಕಾರಿ ಸಂಘದ ಮೂಲಕ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳನ್ನು ಕರೆಸಿ ರೈತರ ಜಮೀನಿನಲ್ಲಿ ಪ್ರಾತ್ಯಕ್ಷಿಕೆಗಳನ್ನು ಮಾಡಿಸಿ ಹೊಸ ಸಂಶೋಧನೆಗಳ ಫಲ ಬೆಳೆಗಾರರಿಗೆ ಸಿಗ್ವಾಂಗಾತು. ಅಲ್ಲದೇ ಸಂಘದಿಂದ ಒಬ್ಬರಿಗೆ ಕೃಷಿಯಲ್ಲಿ ವಿಷೇಶ ತರಬೇತಿ ಕೊಡಿಸಿ ಸಂಘದಿಂದ ರೈತರಿಗೆ ಮಾಹಿತಿ ಸಿಗುವಂತೆ ಮಾಡ್ದ.

೧೯೬೫ರಲ್ಲಿ ಯಮ್ಮನಿಲ್ಲಿ ಸಗಣಿಯ ಅನಿಲ ಸ್ಥಾವರ ಅಣ್ಣನೆ ಮಾಡ್ಸಿದ. ಆ ಸಂದರ್ಭದಲ್ಲಿ ಅನಿಲ ಸ್ಥಾವರ ನೋಡಲ್ಲೆ ಬಂದ ನಮ್ಮ ಭಾಗದ ಹಿರಿಯರೊಬ್ಬರು, ಒಂದು ಕೋಣೆಯಲ್ಲಿ ಕೋಳಿ ಬಿಟ್ಟು ಹೊರಗಿಂದ ಗಾಳಿ ಬಂದುಮಾಡಿ ಸಗಣಿಯ ಅನಿಲದಲ್ಲಿ ಕೋಳಿ ಬದುಕಿ ಉಳಿದ್ರೆ ಮಾತ್ರ ನಾವು ಆ ಅನಿಲ ಬಳ್ಸಲ್ಲೆ ಅಕ್ಕು ಹೇಳಿದಿದ್ರು. ಹಸಿ ಸೊಪ್ಪಿನ ಪೂರೈಕೆಗೆ ಗ್ಲೀರೀಸೀಡಿಯ ಬಂತು. ದನಗಳ ಹಸಿ ಮೇವಿನ ಬಗ್ಗೆ ಸುಧಾರ್ಸಿದ ತಳಿ ಹುಲ್ಲು ಬೆಳ್ಸಲ್ಲೆ ಶುರು ಆತು. ಈ ಎಲ್ಲ ಅಭಿವೃದ್ಧಿಯನ್ನು ಹೆಚ್ಚಿನ ಜನ ಅನುಸರ್ಸಲ್ಲೆ ೨೫ ವರ್ಷ ಹಿಡತ್ತು. ಇಷ್ಟೆಲ್ಲ ಅಭಿವೃದ್ಧಿ ಕಣ್ಣೆದ್ರಿಗೆ ಇದ್ರೂ ಅದನ್ನ ಅನುಸರ್ಸ್ವಲ್ಲಿ ಹೆಚ್ಚಿನ ಜನ್ರಿಗೆ ಅಳಕು ಇತ್ತು. ಯಂಗೆ ಈಗ ಕಾಣ್ತು ಇದ್ದಿದ್ದು ನಮ್ಮವ್ವ ವೈಜ್ಞಾನಿಕವಾಗಿ ವಿಚಾರ ಮಾಡದು ಕಡಿಮೆ. ಕಾರ್ಯ ಕಾರಣ ಸಂಬಂಧ ಪರಿಶೀಲ್ಸಿ ಮುಂದ್ವರ್ಯವ್ವ ಬಹಳ ಕಡಿಮೆ. ಈಗ ಬನವಾಸಿಲ್ಲಿ ನಿವೃತ್ತ ಕೃಷಿ ಶಾಸ್ತ್ರ ಪ್ರಾಧ್ಯಾಪಕ ಶ್ರೀ ಲಕ್ಷ್ಮೀನಾರಾಯಣ ದೀಕ್ಷಿತರು ಯಾವ್ದೇ ರೈತಂಗೂ ಸಮಸ್ಯೆಗಳ ಬಗ್ಗೆ ವಿವರವಾಗಿ ಮಾಹಿತಿ ಕೊಡ್ತ್ರು. ಅವ್ರು ನಾವೆಲ್ಲರೂ ಕೃಷಿಯಲ್ಲಿ ಸರಿಯಾದ ಕ್ರಮ ಅನುಸರ್ಸದ್ರ ಬಗ್ಗೆ ಬಹಳ ಪುಸ್ತಕ ಬರ್ದ್ರು. ಅವ್ರ ಮಾರ್ಗದರ್ಶನದಲ್ಲಿ ನಮ್ಮ ಸ್ವರ್ಣವಲ್ಲೀ ಶ್ರೀ ಮಠದ ಜಮೀನಿನಲ್ಲಿ ಕೃಷಿ ಮಾಡಿದ್ರಿಂದ, ೧೯೯೧ರಲ್ಲಿ ೧೧ ಎಕ್ರೆಯಿಂದ ೭೦ ಕ್ವಿಂಟಲ್ ಅಡಿಕೆ ಬರ್ತಾ ಇದ್ದಿದ್ದು, ೨೦೦೫ರಲ್ಲಿ ೧೫ ಎಕ್ರೆಗೆ ೨೫೦ ಕ್ವಿಂಟಲ್ಲಿಗೆ ಏರಿದ್ದು. ಕೊಟ್ಟಿಗೆಯಲ್ಲಿ ೪೦ ದನದಿಂದ ೧೫ ಲೀಟರ್ ಹಾಲು ಬಪ್ಪದು ಈಗ ೧೫ ದನದಿಂದ ೭೫ ಲೀಟರ್ ಹಾಲು ಬರ್ತಾ ಇದ್ದು. ಅವ್ರು ಕೃಷಿ ಬಗ್ಗೆ ಮೊದ್ಲಿಗೆ ಹೇಳ ಮಾತು "ನಮ್ಮ ಹಿರಿಯರು ನಮ್ಗೆ ಬೆಳೆ ಬಪ್ಪಂತಾ ಭೂಮಿ ಕೊಟ್ಟಿದ್ದ .ನಾವು ಸಾಧ್ಯ

ಆದ್ರೆ ಅದ್ರ ಫಲವತ್ತತೆ ಹೆಚ್ಚಸವ್ವು. ಇಲ್ಯ ಈಗಿಪ್ಪಷ್ಟೆ ಆದ್ರೂ ಇಪ್ಪಾಂಗೆ ನೋಡ್ಕ್ಯಳವ್ವು".

ಇನ್ನು ಪರ್ಯಾಯ ಬೆಳೆ: ಯಂಗ್ಳೀ ಮಾವು, ಚಿಕ್ಕು, ಗೇರು, ಪೇರ್ಳೆ, ಪಪ್ಪಾಯಿ ಮತ್ತೆ ಬಾಳೆ ಬೆಳೆ ತಗಂಡ್ಯ. ಒಣ ಭೂಮಿಲ್ಲಿ ಈ ಎಲ್ಲ ಬೆಳೆನೂ ಚೆನ್ನಾಗಿ ಬರ್ತು. ತಿಪಟೂರಿನಲ್ಲಿ ಬೈಫ್ ಸಂಸ್ಥೆ ಸಂಪೂರ್ಣ ಒಣ ಭೂಮಿಲ್ಲಿ ಬನಾರಸ ನೆಲ್ಲಿ, ಹುಣಿಸೆ, ಗೇರು, ಮಾವು ಅಲ್ದೆ ಔಷಧೀಯ ಸಸ್ಯಗಳನ್ನೂ ಬೆಳ್ಸಿದ್ದ. ಆರ್ಥಿಕವಾಗಿ ಕೂಡ ಚೆನ್ನಾಗಿ ಬಂಜು. ಮೂಡಬಿದ್ರೆ ಜೀವಂಧರಕುಮಾರ ಬಲ್ಲಾಳರು ಎಂಥೋರಿಯಂ ಕೃಷಿ ಮಾಡಿದ್ದು ಕೂಡ ಒಳ್ಳೀದಾಗಿದ್ದು. ಯನ್ನ ಮತ್ತೊಂದು ಅಣ್ಣ, ಶ್ರೀ ರಘುಪತಿ ಹೆಗ್ಡೆ, ಭೈರುಂಬೆ ರೇಷ್ಮೆ ಬೆಳೆಯಲ್ಲಿ ರಾಷ್ಟ್ರಕ್ಕೆ ಪ್ರಥಮ ಆಗಿದ್ದ.

ಅಡಿಕೆ ಬೆಲೆ ಬಗ್ಗೆ ಹೇಳದಾದ್ರೆ ೧೦ರಿಂದ ೧೫ವರ್ಷಕ್ಕೊಮ್ಮೆ ಏರಿಳ್ತ ಇದ್ದಿದ್ದೆಯ. ನಮ್ಮ ಎಕ್ರೆವಾರ ಉತ್ಪನ್ನ ಹೆಚ್ಚಪ್ಪಾಂಗೆ ಮಾಡ್ಕ್ಯಳವ್ವು. ವಾರ್ಷಿಕ ಕೆಲ್ಸಕ್ಕೆ ಉತ್ಪನ್ನದ ಪ್ರತಿಶತ ೩೫ದ್ರಕಿಂತ ಜಾಸ್ತಿ ಅಪ್ಲಾಗ್ದೇ ಹೇಳದು ದೀಕ್ಷಿತ್ರ ಅಭಿಮತ. ಯಂಗಕ್ಕೆ ಈಗ ವಾರ್ಷಿಕ ಕೆಲ್ಸಕ್ಕೆ ಸರಾಸರಿ ಒಂದು ಎಕ್ರೆಗೆ ೩೦ರಿಂದ ೪೦ಸಾವ್ರ ಖರ್ಚು ಬರ್ತು. ಉತ್ಪನ್ನ ಸರಾಸರಿ ೧೫ಕ್ವಿಂಟಾಲ್ ಮೇಲೆ ಅಡಿಕೆ ಬರ್ತು. ಬಾಳೆ ಮತ್ತೆ ಮೆಣ್ಸು ಸ್ವಲ್ಪ ಬರ್ತು. ಧಾರಣೆ ಕುಸ್ದಾಗ ಅಲ್ಲಿಂದಲ್ಲಿಗೆ. ಏರ್ದಾಗ ಒಳ್ಳೀದಾಗ್ತು.

ನಮ್ಮವ್ಕೆ ದೊಡ್ಡ ತಾಪತ್ರಯ ಆಗಿದ್ದು ಆಸ್ತಿ ಪಡದು ಸಣ್ಣಾಗ್ತಾ ಹೋಗಿದ್ದು. ಇನ್ನು ಕ್ಯಾಂಪ್ಕೊ ಕಾಜೂ ಸುಪಾರಿ ಎಲ್ಲ ಬದಿಗು ಸಿಗ್ವಾಂಗೆ ಆದ್ರೆ, ಅಡಿಕೆಗೆ ಒಳ್ಳೆ ಭವಿಷ್ಯ ಇದ್ದು. ಮೊದ್ಲು ಅಮೇರಿಕದ ಸ್ಟ್ಯಾನ್ಫರ್ಡ್

ಯುನಿವರ್ಸಿಟೀಲ್ಲಿ ಪ್ರಕಟಣೆ ಆದ ಸಂಶೋಧನಾ ವರದಿ, ಅಡಿಕೆ ಕ್ಯಾನ್ಸರ್ ಕಾರಿ ಎನ್ನುವದು ತಪ್ಪು ಹೇಳಿ ನಮ್ಮವ್ವು ಒಂದು ಸಂಶೋಧನೆ ಮಾಡಿದ್ರೆ ಬಹಳ ಒಳ್ಳೇದಾಗ್ತು. ಸಾಂಪ್ರದಾಯಿಕವಾಗಿ ಅಡಿಕೆ ಬೆಳೆಯುವ ಪ್ರದೇಶದಲ್ಲೇ ಕ್ಷೇತ್ರ ೩ ಪಟ್ಟು ಹೆಚ್ಚಾಗಿಕ್ಕು. ಬಯಲು ಸೀಮೆಯಲ್ಲಿ ಸಿಕ್ಕಾಪಟ್ಟೆ ಹೆಚ್ಚಾಜು. ಆದ್ರೂ ಹೊರ ದೇಶದಿಂದ ಮತ್ತೆ ಅಡಿಕೆ ಬರ್ತು. ಇದೆಲ್ಲದೂ ಮತ್ತೆ ತಿಂದೇ ಖರ್ಚಪ್ಪದು. ತಿಂಬದಾಗಿದ್ದಕ್ಕೆ ಈ ಬೆಲೆ ಸಿಕ್ತಾ ಇದ್ದು. ಉದ್ದಿಮೆಗಾದ್ರೆ ಈ ಬೆಲೆ ಸಿಗ್ತಿಲ್ಲೆ. ಯನ್ನ ತಿಳುವಳಿಕೆ ಮಟ್ಟದಲ್ಲಿ ಪ್ರಾಸ್ತಾವಿಕವಾಗಿ ಈ ವಿಷಯ ಇಟ್ಟದ್ದಿ, ಬಹಳ ಜನ ಸಾಧಕರು ಇದ್ದ, ಒಂದೊಂದು ವಿಷಯ ತಗಂಡ್ರೆ ಕೂಲಂಕಷ ವಿಚಾರ ಮಾಡದಕ್ಕೆ ಅವಕಾಶ ಆಗ್ತು.

ಕೊನೆಯದಾಗಿ ಒಂದು ಮಾತು. ಈ ಚರ್ಚೆಯನ್ನು ಆದಷ್ಟು ನಮ್ಮ ಹವ್ಯಕ ಭಾಷೆಯಲ್ಲೇ ಮಾಡನ. ಆತ್ಮೀಯತೆ ಜಾಸ್ತಿ ಆಗ್ತು .

ಇಂತು ವಂದನೆಗಳೊಡನೆ,

ಮಹಾದೇವ ಹೆಗಡೆ. ಗಡಿಕೈ.

ಭೈರುಂಬೆ ಅಂಚೆ.

ಶಿರಸಿ. ಉತ್ತರಕನ್ನಡ. ೩೮೧೪೦೨.